# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಜಿಎಮ್/1492/2021
ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ: 20/11/2021.
24

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರುಗಳಾದ **1) ಶ್ರೀ. ದಿವಾಕರ ಕೆ. ಶಂಕಿನದಾಸರ ಬಿನ್ ಕಾಳಪ್ಪ ಶಂಕಿನದಾಸರ, ಜಿಲ್ಲಾ ವ್ಯವಸ್ಥಾಪಕರು, 2) ರಂಗಪ್ಪ ಟಿ. ಹೆಚ್. ಬಿನ್ ಟಿ. ಹನುಮಂತಪ್ಪ, ತಾಲ್ಲೂಕ ಅಭಿವೃದ್ಧಿ ಅಧಿಕಾರಿಗಳು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಕಚೇರಿ, ಹಾವೇರಿ, ಹಾವೇರಿ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

**1.** ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಹಾವೇರಿ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **1) ಶ್ರೀ. ದಿವಾಕರ ಕೆ. ಶಂಕಿನದಾಸರ ಬಿನ್ ಕಾಳಪ್ಪ ಶಂಕಿನದಾಸರ, ಜಿಲ್ಲಾ ವ್ಯವಸ್ಥಾಪಕರು, 2) ರಂಗಪ್ಪ ಟಿ. ಹೆಚ್. ಬಿನ್ ಟಿ. ಹನುಮಂತಪ್ಪ, ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಕಚೇರಿ, ಹಾವೇರಿ, ಹಾವೇರಿ ಜಿಲ್ಲೆ,** (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ಶಿವಪ್ಪ ಮಾಳಗಿ, ಬಿನ್ ಬಸವಣ್ಣಪ್ಪ ಮಾಳಗಿ, ಸಾ: ಕುರುಬಗೊಂಡ, ತಾ. ಹಾವೇರಿ, ಹಾವೇರಿ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು, ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಹಾವೇರಿ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ:02/2017 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ತನ್ನ ಜೀವನೋಪಾಯಕ್ಕಾಗಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಕಚೇರಿ, ಹಾವೇರಿ, ಕಚೇರಿಯಲ್ಲಿ ಸರ್ಕಾರದ ಸಬ್ಸಿಡಿಯಿಂದ ಸ್ವಂತ ವಾಹನ ಹೊಂದಲು ದಿನಾಂಕ 18/04/2016 ರಂದು ಅರ್ಜಿ ಹಾಕಿದ್ದು, ಸುಮಾರು 2-ತಿಂಗಳ ನಂತರ ದಾಖಲಾತಿ ಪರಿಶೀಲನೆಗಾಗಿ ಕಚೇರಿಗೆ ಬರಲು ಫೋನ್ ಮುಖಾಂತರ ತಿಳಿಸಿದ್ದು, ನಂತರ ದೂರುದಾರರು ಮರುದಿವಸ

ಎದುರುದಾರರುಗಳ ಕಚೇರಿಗೆ ಬಂದು 2ನೇ ಎದುರುದಾರರನ್ನು ಭೇಟಿ ಮಾಡಿ ದಾಖಲಾತಿಗಳನ್ನು ತೋರಿಸಿದ್ದು, 2ನೇ ಎದುರುದಾರರು ದಾಖಲಾತಿಗಳನ್ನು ಪರಿಶೀಲಿಸಿ, ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಸಾಲ ಸೌಲಭ್ಯವನ್ನು ಪಡೆದಿರುವುದಿಲ್ಲ ಎಂದು ಧೃಡೀಕರಣ ಪತ್ರ ತರಲು ತಿಳಿಸಿದ ಮೇರೆಗೆ, ದೂರುದಾರರು ದಿ: 06/02/2017ರಂದು ಸದರಿ ಧೃಡೀಕರಣ ಪತ್ರವನ್ನು 2ನೇ ಎದುರುದಾರರ ಕಡೆಗೆ ಕೊಟ್ಟಿರುತ್ತಾರೆ. ಆಗ 2ನೇ ಎದುರುದಾರರು ದೂರುದಾರರ ಮನೆ ಪರಿಶೀಲನೆಗೆ ಬರುತ್ತೇನೆಂದು ಹೇಳಿರುತ್ತಾರೆ. ದಿ.25/03/2017ರಂದು ದೂರುದಾರರು ಕಾರ್ಪೊರೇಷನ್ ಬ್ಯಾಂಕಿನ ಸಾಲ ಮಂಜೂರು ದಾಖಲಾತಿಗಳನ್ನು ಪಡೆದು ಅಗ್ರಿಮೆಂಟ್ ಬಾಂಡ್ ಮಾಡಿಸಿಕೊಂಡು, ಎದುರುದಾರರುಗಳ ಕಚೇರಿಯಲ್ಲಿ ಕೊಟ್ಟಿದ್ದು, ಅದಾದ 4-ದಿನಗಳ ನಂತರ ದೂರುದಾರರು 2ನೇ ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರಿಗೆ 60,000/- ರೂ.ಗಳನ್ನು ಕೊಟ್ಟರೆ ನಿಮಗೆ 5-ಲಕ್ಷ ಹಣ ಸಬ್ಸಿಡಿ ಮಾಡಿಸಿಕೊಡುತ್ತೇನೆ, ಇಲ್ಲವಾದರೆ ಅರ್ಜಿಯನ್ನು ರದ್ದು ಮಾಡುತ್ತೇನೆಂದು ತಿಳಿಸಿರುತ್ತಾರೆ. ದಿನಾಂಕ:01/04/2017ರಂದು ದೂರುದಾರರು 2ನೇ ಎದುರುದಾರರನ್ನು ಭೇಟಿ ಮಾಡಿದಾಗ, ದೂರುದಾರರಿಗೆ ಜಿಲ್ಲಾ ವ್ಯವಸ್ಥಾಪಕರ ಜೊತೆಗೆ ಮಾತನಾಡು ಅಂತ ಹೇಳಿ ದಿ.03/04/2017ರಂದು ಬರಲು ತಿಳಿಸಿರುತ್ತಾರೆ. ದಿನಾಂಕ:03/04/2017ರಂದು ಸಂಜೆ 4-30 ಗಂಟೆಗೆ ದೂರುದಾರರು 2ನೇ ಎದುರುದಾರರನ್ನು ಭೇಟಿ ಮಾಡಿದಾಗ, ಅವರು 1ನೇ ಎದುರುದಾರರನ್ನು ಭೇಟಿ ಮಾಡಿಸಿದ್ದು, 1ನೇ ಎದುರುದಾರರು 40,000/- ರೂ.ಗಳಲ್ಲಿ 5,000/- ರೂ.ಗಳನ್ನು ಕಡಿಮೆ ಮಾಡಿ ಕೊಡು ಅಂತ ಹೇಳಿರುತ್ತಾರೆ. ಆಗ ದೂರುದಾರರು ತಾನು ಬಡವನಿರುವುದಾಗಿ ಹೇಳಿದ್ದು, ಆಗ 1ನೇ ಎದುರುದಾರರು "ನಿನಗೆ ಏನೂ ಆಗುವುದಿಲ್ಲ 5-ಲಕ್ಷ ರೂಪಾಯಿ ಕೊಡುತ್ತೇನೆ, ನೀನೇನೂ ಕೈಯಿಂದ ಕೊಡುವುದಿಲ್ಲ" ಅಂತಾ ಹೇಳಿರುತ್ತಾರೆ. ಆಗ ದೂರುದಾರರು 2ನೇ ಎದುರುದಾರನ್ನು ಭೇಟಿ ಮಾಡಿ, 1ನೇ ಎದುರುದಾರರು 30,000/- ರೂ.ಗಳನ್ನು ಕೊಡುವಂತೆ ಹೇಳಿರುತ್ತಾರೆ ಅಂತಾ ತಿಳಿಸಿರುತ್ತಾರೆ. ಆಗ 2ನೇ ಎದುರುದಾರರು ದಿನಾಂಕ: 04/04/2017ರಂದು ಮೀಟಿಂಗ್‌ಗೆ ತಾವು ಹೋಗುವುದಾಗಿ ಗಣೇಶನ ಕೈಯಲ್ಲಿ 30,000/- ರೂ.ಗಳನ್ನು ಕೊಟ್ಟರು ಅಂತಾ ದೂರುದಾರರಿಗೆ ತಿಳಿಸಿರುತ್ತಾರೆ. ಆಗ ದೂರುದಾರರು 20,000/- ರೂ.ಗಳನ್ನು ಈಗ ಕೊಡುವುದಾಗಿ ಉಳಿದ ಹಣವನ್ನು ಚೆಕ್ ಪಡೆಯುವಾಗ ನಂತರ ಕೊಡುವುದಾಗಿ ತಿಳಿಸಿರುತ್ತಾರೆ. ದೂರುದಾರರು ಲಂಚದ ಹಣ ನೀಡಲು ಬೇಡಿಕೆ ಇಟ್ಟು ಮಾತನಾಡಿದ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ ಹಾಗೂ ಸಿ.ಡಿಯಲ್ಲಿ ಡೌನ್ ಲೋಡ್ ಮಾಡಿಕೊಂಡಿರುತ್ತಾರೆ.

ii. ದಿನಾಂಕ:04/04/2017ರಂದು ದೂರುದಾರರು ತನಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಹಾವೇರಿ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 02/2017 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ದಿನಾಂಕ: 05/04/2017ರಂದು ಬೆಳಿಗ್ಗೆ 11–15 ಗಂಟೆಗೆ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ಶಿವಕುಮಾರ (ನೆರಳು ಸಾಕ್ಷಿ), 2) ಶ್ರೀ ರಾಜೀವ, ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ಒಂದು ಸಿ.ಡಿಯನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಸದರಿ ಸಿ.ಡಿಯನ್ನು ಲ್ಯಾಪ್ ಟಾಪ್ಗೆ ಹಾಕಿ ಪ್ಲೇ ಮಾಡಿ, ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರಾದ ನೀವುಗಳು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ. 2,000/– ಮುಖಬೆಲೆಯ 08–ನೋಟುಗಳು ಮತ್ತು ರೂ. 500/– ಮುಖಬೆಲೆಯ 08–ನೋಟುಗಳು) ಒಟ್ಟು 20,000/– ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ತನಿಖಾಧಿಕಾರಿಗಳು ಪಂಚರ ಕಡೆಯಿಂದ ಪ್ರತ್ಯೇಕ ಹಾಳೆಯಲ್ಲಿ ಬರೆಯಿಸಿದ್ದು, ಅವುಗಳ ನಂ. ಮತ್ತು ಮೌಲ್ಯವನ್ನು ಪಂಚರು ಪರಿಶೀಲಿಸಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚ ಸಾಕ್ಷಿ ರಾಜೀವ ರವರ ಕೈಗೆ ಕೊಟ್ಟಿದ್ದು, ಸದರಿಯವರು ಸದರಿ ನೋಟುಗಳನ್ನು ಎಣಿಸಿ ಅವುಗಳ ನಂ. ಮತ್ತು ಮೌಲ್ಯವನ್ನು ತಾಳೆ ಮಾಡಿ ಖಾತ್ರಿ ಪಡಿಸಿಕೊಂಡಿರುತ್ತಾರೆ ಹಾಗೂ ಫಿನಾಫ್ತಲೀನ್ ಲೇಪಿತ ಹಣವನ್ನು ದೂರುದಾರರು ಧರಿಸಿದ್ದ ಷರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ರಾಜೀವರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಶಿವಕುಮಾರವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಿ, ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ದೂರುದಾರರು ಅವರ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವಂತೆ ಸನ್ನೆ ಮಾಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡ್‌ನ್ನು ದೂರುದಾರರಿಗೆ ತನಿಖಾಧಿಕಾರಿಗಳು ನೀಡಿ, ಎದುರುದಾರರನ್ನು ಭೇಟಿ ಮಾಡಲು ಹೋಗುವಾಗ ಆನ್ ಮಾಡಿಕೊಂಡು ಹೋಗಲು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರು ಹಾಜರುಪಡಿಸಿದ್ದ ಸಿಡಿಯನ್ನು ಲ್ಯಾಪ್ ಟಾಪ್ಗೆ ಅಳವಡಿಸಿ ಅದರಲ್ಲಿಯ ಸಂಭಾಷಣೆಯನ್ನು 2–ಡಿವಿಡಿಗಳಿಗೆ ವರ್ಗಾಯಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋ ತೆಗೆಯಿಸಿ, ದಿ.05.04.2017ರಂದು ಬೆಳಿಗ್ಗೆ 11–35ರಿಂದ ಮಧ್ಯಾಹ್ನ 01–45 ಗಂಟೆಯವರೆಗೆ ಹಾವೇರಿ ಎಸಿಬಿ ಕಚೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iv. ಅದೇ ದಿನ ಅಂದರೆ, ದಿನಾಂಕ:05/04/2017ರಂದು ಮಧ್ಯಾಹ್ನ 03–10 ಗಂಟೆಗೆ ದೂರುದಾರರು ಹಾಗೂ ನೆರಳು ಸಾಕ್ಷಿ ಶಿವಕುಮಾರವರೊಂದಿಗೆ ಎದುರುದಾರರ ಕಚೇರಿಗೆ ಬಂದು ಸುಮಾರು ಮುಕ್ಕಾಲು ಗಂಟೆಯ ನಂತರ ದೂರುದಾರ, ನೆರಳು ಸಾಕ್ಷಿ ಹಾಗೂ 2ನೇ ಎದುರುದಾರರು ಅವರ ಕಚೇರಿಯಿಂದ ಕೆಳಗೆ ಇಳಿದು, ಹೊರಗಡೆ ಬಂದು ಶಿವಶಕ್ತಿ ಪ್ಯಾಲೇಸ್‌ಗೆ ಹೋಗಿ ಅಲ್ಲಿ ಚಹಾ ಕುಡಿದು ನಂತರ ಮತ್ತೆ ಕಚೇರಿಗೆ ದೂರುದಾರ, ನೆರಳು ಸಾಕ್ಷಿ ಹಾಗೂ 2ನೇ ಎದುರುದಾರರು ಅವರ ಕಚೇರಿಗೆ ವಾಪಸ್ಸು ಬಂದಿರುತ್ತಾರೆ. ವಾಪಸ್ಸು ಬಂದು ಎದುರುದಾರರ ಕಚೇರಿಗೆ ಹೋಗಲು ಮೆಟ್ಟಿಲು ಹತ್ತುವಾಗ 2ನೇ ಎದುರುದಾರರು ಆಫೀಸ್‌ನಲ್ಲಿ ಜನ ಸರಿ ಇಲ್ಲ, ನಾನು ಗಣೇಶನಿಗೆ ಹೇಳುತ್ತೇನೆ, ಅವನ ಕೈಯಲ್ಲಿ ಕೊಡು ಅಂತ ದೂರುದಾರರಿಗೆ ಹೇಳಿರುತ್ತಾರೆ. ನಂತರ ಕಚೇರಿಯ ಒಳಗಡೆ ಹೋದ ನಂತರ 2ನೇ ಎದುರುದಾರರು ಗಣೇಶನ ಜೊತೆ ಬೇರೆ ರೂಂನಲ್ಲಿ ಹೋಗಿ ದುಡ್ಡಿನ ವಿಚಾರವಾಗಿ ಮಾತನಾಡಿರುತ್ತಾರೆ. ನಂತರ ದೂರುದಾರರು ಗಣೇಶನ ಜೊತೆಗೆ ಕಚೇರಿಯ ಹೊರ ಆವರಣದಲ್ಲಿ ಹೋಗಿ ಮಾತನಾಡಿದ್ದು, ಗಣೇಶನು ಎದುರುದಾರರುಗಳ ಪರವಾಗಿ ದೂರುದಾರರಿಂದ 20,000/– ರೂ.ಗಳ ಲಂಚದ ಹಣವನ್ನು ಕೇಳಿ ಪಡೆದು ತನ್ನ ಪ್ಯಾಂಟಿನ ಎಡಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಹೊರಗಡೆ ಬಂದು ಪೂರ್ವ ನಿಗದಿತ ಸನ್ನೆಯನ್ನು ಮಾಡಿರುತ್ತಾರೆ.

v. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಸದರಿ ಗಣೇಶ ಹಾಗೂ 2ನೇ ಎದುರುದಾರರು ಇದ್ದ ಸ್ಥಳಕ್ಕೆ ಬಂದು, ತಮ್ಮ ಗುರುತಿನ ಚೀಟಿ ತೋರಿಸಿ, ಅವರ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ಎರಡು ಪ್ರತ್ಯೇಕ ಬಟ್ಟಲುಗಳಲ್ಲಿ ಗಣೇಶರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ಪಡೆದ ಲಂಚದ ಹಣವನ್ನು ಎಲ್ಲಿಟ್ಟಿದ್ದೀರಿ ಎಂದು ಸದರಿ ಗಣೇಶರವರಿಗೆ ಕೇಳಲಾಗಿ ತನ್ನ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿ, ಹಣವನ್ನು ತನ್ನ ಜೇಬಿನಿಂದ ತೆಗೆದು ಟೇಬಲ್ ಮೇಲೆ ಇಟ್ಟಿದ್ದು, ಪಂಚರ ಮೂಲಕ ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ತನಿಖಾಧಿಕಾರಿಗಳ ಹೇಳಿಕೆಯ ಮೇರೆಗೆ, ಇನ್ನೊಬ್ಬ ಪಿ.ಐ. ಮಂಜುನಾಥ ಪಂಡಿತ್ ರವರು 1ನೇ ಎದುರುದಾರರನ್ನು ಧಾರವಾಡದಿಂದ ರಾತ್ರಿ 8–15ಗಂಟೆಗೆ ಕರೆದುಕೊಂಡು ಬಂದು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು ಇರುತ್ತದೆ. ಎದುರುದಾರರು ಈ ಬಗ್ಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

vi. ನಂತರ ತನಿಖಾಧಿಕಾರಿಗಳು 2ನೇ ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, 2ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ ". . . ದಿನಾಂಕ:05/04/2017ರಂದು ನಾನು ಹಾನಗಲ್ ಕ್ಷೇತ್ರದ ಫಿಲ್ಡ್ ವರ್ಕ್ ಹೋಗಿರುತ್ತೇನೆ. ಮತ್ತು ನಾನು ಮಧ್ಯಾಹ್ನ ಊಟ ಮುಗಿಸಿ ನನ್ನ ಕಚೇರಿಗೆ ಮಧ್ಯಾಹ್ನ 3.00 ಗಂಟೆಗೆ ಬಂದಿರುತ್ತೇನೆ. ಸುಮಾರು 3.30 ಗಂಟೆಗೆ ಬ್ಯಾಡಗಿ ಕ್ಷೇತ್ರದ ಫಲಾನುಭವಿ ನನ್ನ ಸಹಾಯಧನದ ಬಗ್ಗೆ ವಿಚಾರಿಸಿದರು. ನಾನು ಅವರ ಹತ್ತಿರ ಜಿಲ್ಲಾ ವ್ಯವಸ್ಥಾಪಕರು ಎರಡು ದಿನ ಆಫೀಸಿಗೆ ಬಂದಿಲ್ಲಾ, ನಾಳೆ ಆಫೀಸಿಗೆ ಬರುತ್ತಾರೆ ಬಂದ ತಕ್ಷಣ ನಿನ್ನ ಸಹಾಯಧನ ರಿಲೀಸ್ ಮಾಡುತ್ತಾರೆ ಎಂದು ಅವರಿಗೆ ತಿಳಿಸಿರುತ್ತೇನೆ. ಮತ್ತು ನನಗೆ ಟೀ ಕುಡಿಯುವುದಕ್ಕೆ ತಿಳಿಸಿರುತ್ತಾರೆ. ಟೀ ಕುಡಿದ ಮೇಲೆ ನನ್ನ ಬ್ಯಾಡಗಿ ಕ್ಷೇತ್ರದ ಮತ್ತೊಬ್ಬ ಫಲಾನುಭವಿ ಬಂದಿರುತ್ತಾರೆ. ಅವರ ಹತ್ತಿರ ನನ್ನ ಸ್ಕೀಮ್ ಬಗ್ಗೆ ವಿವರಣೆ ನೀಡಿರುವಾಗ ಭ್ರಷ್ಟಾಚಾರ ಇಲಾಖೆಯವರು ನಮ್ಮ ಆಫೀಸಿಗೆ ತನಿಖೆಗೆ ಬಂದಿರುತ್ತಾರೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರನ್ನು ಈ ಬಗ್ಗೆ ವಿಚಾರಣೆ ಮಾಡಲಾಗಿ, ಅವರು "2ನೇ ಎದುರುದಾರರು ಸುಳ್ಳು ಬರವಣಿಗೆ ಹೇಳಿಕೆಯನ್ನು ಕೊಟ್ಟಿರುತ್ತಾರೆ, ಏಕೆಂದರೆ ನಮ್ಮ ಜೊತೆ ಶಿವಶಕ್ತಿ ಪ್ಯಾಲೇಸ್ ದ ಹೋಟೆಲ್ ದಲ್ಲಿ ಚಹ ಕುಡಿದು ವಾಪಸ್ಸು ಬರುವಾಗ ಎಲ್.ಐ.ಸಿ. ಆಫೀಸ್ ಎದುರುಗಡೆ ಹಾಗೂ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕಚೇರಿ ಎದುರುಗಡೆ ಮಾತನಾಡಿ ದುಡ್ಡನ್ನು ಗಣೇಶನ ಕಡೆ ಹೇಳ್ತೀನಿ ಗಣೇಶನಿಗೆ ಕೊಡು ಅಂತಾ ಹೇಳಿದ್ದು, ಈಗ ಲಂಚದ ಹಣವನ್ನು ಪಡೆದುಕೊಂಡು ಸಿಕ್ಕಿ ಬಿದ್ದಿದ್ದರಿಂದ ಈ ರೀತಿ ಸುಳ್ಳು ಹೇಳಿಕೆ ಕೊಟ್ಟಿರುತ್ತಾರೆ" ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ-1ನೇದವರನ್ನು 2ನೇ ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಿದಾಗ, ಅವರು "2ನೇ ಎದುರುದಾರರು ಸುಳ್ಳು ಬರವಣಿಗೆ ಹೇಳಿಕೆಯನ್ನು ನೀಡಿರುತ್ತಾರೆ, ಏಕೆಂದರೆ ಎದುರುದಾರರು ಸರ್ಕಾರಿ ಅಧಿಕಾರಿಯು ಅವರದೇ ಕಚೇರಿಯ ನೌಕರನಾದ ಗಣೇಶರವರಿಗೆ ಲಂಚದ ಹಣ ನೀಡುವುದಕ್ಕಾಗಿ ದೂರುದಾರರ ಬಳಿ ಹೇಳಿದ್ದು ಇರುತ್ತದೆ" ಎಂದು ತಿಳಿಸಿರುತ್ತಾರೆ.

vii. ನಂತರ ತನಿಖಾಧಿಕಾರಗಳು 1ನೇ ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, 1ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ ". . . ಜುಲೈ 2016 ರಿಂದ ಜಿಲ್ಲಾ ವ್ಯವಸ್ಥಾಪಕರಾಗಿ ಪ್ರಭಾರ ಕಾರ್ಯಭಾರ ನಿರ್ವಹಿಸುತ್ತಿದ್ದೇನೆ. ನಾನು ಧಾರವಾಡ ಜಿಲ್ಲಾ ವ್ಯವಸ್ಥಾಪಕರಾಗಿ ರೆಗ್ಯುಲರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾನು ಈ ಇಲಾಖೆಯ ಪ್ರಾಮಾಣಿಕವಾಗಿ ಎಸ್.ಟಿ. ಜನಾಂಗಕ್ಕೆ ಸರ್ಕಾರದ ಸೌಲಭ್ಯಗಳನ್ನು ಯೋಜನೆಗಳನ್ನು ಅವರಿಗೆ ತಲುಪಿಸಲು ಪ್ರಯತ್ನಿಸುತ್ತಾ ಬಂದಿದ್ದೇನೆ. ಈ ದಿನ ಧಾರವಾಡದಲ್ಲಿ ನಾನು ಜಗಜೀವನ ರಾಮ್‌ರವರ ಜನ್ಮ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ಹಾಗೂ ನನಗೆ ಜಿಲ್ಲಾಡಳಿತದಿಂದ ಸನ್ಮಾನ ಕಾರ್ಯಕ್ರಮದ ನಿಮಿತ್ತ ಧಾರವಾಡದಲ್ಲಿ ಇದ್ದೆನು. ಕಾರ್ಯಕ್ರಮದ ಮುಕ್ತಾಯದ ನಂತರ ಧಾರವಾಡ ಕಾರ್ಯಾಲಯದಲ್ಲಿ ಕಾರ್ಯ

ನಿರ್ವಹಿಸುತ್ತಿದ್ದೆನು. ಆಗ ಧಾರವಾಡ ಜಿಲ್ಲಾ ಎಸಿಬಿ ಇನ್ಸ್‌ಪೆಕ್ಟರ್‌ರವರು ಬಂದು ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದಾರೆ. ಅಲ್ಲಿಯವರೆಗೆ ಈ ಘಟನೆಯ ಬಗ್ಗೆ ಏನೂ ಗೊತ್ತಿಲ್ಲಾ, ನಾನು ಯಾವುದೇ ಫಲಾನುಭವಿಗಳಿಂದ ಹಣ ಕೇಳಿಲ್ಲಾ ಈ ವಿಷಯವಾಗಿ ಯಾರು ಆತನಿಗೆ ಹಣ ಕೇಳಿದ್ದಾರೆ. ಯಾರಿಗೆ ಹಣ ಕೊಟ್ಟಿದ್ದಾನೆ ಎಂಬ ವಿಷಯ ನನಗೆ ಗೊತ್ತಿಲ್ಲಾ. ಈ ಫಿರ್ಯಾದಿಗೂ ನನಗೂ ಯಾವುದೇ ಸಂಬಂಧವಿಲ್ಲ. ಆದ್ದರಿಂದ ನನಗೆ ಈ ಘಟನೆ ತುಂಬಾ ಆಘಾತವನ್ನುಂಟು ಮಾಡಿದೆ. ನನಗೆ ಮಾನಸಿಕವಾಗಿ ತುಂಬಾ ನೋವಾಗಿದೆ ನಾನು ನಮ್ಮ ಸಿಬ್ಬಂದಿಗೆ ಹಣ ಪಡೆಯಲು ಯಾವುದೇ ಸೂಚನೆಯನ್ನು ನೀಡಿಲ್ಲಾ. ಇದು ಶುದ್ಧ ಸುಳ್ಳು ಫಿರ್ಯಾದಿಯಾಗಿದೆ ಎಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ತಾವು ನಡೆಸುವ ಯಾವುದೇ ತನಿಖೆಗೂ ಸಹ ನಾನು ತಮಗೆ ಸಹಕರಿಸುತ್ತೇನೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಈ ಬಗ್ಗೆ ವಿಚಾರಣೆ ಮಾಡಲಾಗಿ ಅವರು "ದಿನಾಂಕ: 03/04/2017 ರಂದು ಸಾಯಂಕಾಲ ರಂಗಪ್ಪ ಇವರನ್ನು ಭೇಟಿ ಮಾಡಿದಾಗ ರಂಗಪ್ಪ ರವರು ನನ್ನನ್ನು ಜಿಲ್ಲಾ ವ್ಯವಸ್ಥಾಪಕರು, ದಿವಾಕರ ಕೆ. ಶಂಕಿನದಾಸರ ರವರನ್ನು ಭೇಟಿ ಮಾಡಿಸಿದ್ದು, ಆಗ ಅವರು ನನಗೆ ಸಹಾಯ ಧನದ ಚೆಕ್ ಬಗ್ಗೆ ಮಾತನಾಡಿಸಿದಾಗ, ಅವರು ನೀನು ಏನಾದರೂ ಮಾಡು, ನಾವು ಹೇಳಿದ್ರಾಗ ನಲವತ್ತ ಸಾವಿರದಲ್ಲಿ ಐದು ಸಾವಿರ ರೂಪಾಯಿ ಕಡಿಮೆ ಮಾಡು, ನಿನಗೆ ಐದು ಲಕ್ಷ ರೂಪಾಯಿ ಕೊಡತಿವೋ ನೀ ಏನು ಕೈಯಿಂದ ಕೊಡಂಗಿಲ್ಲ ಅಂತಾ ಹೇಳಿದರು, ಮತ್ತ ನೀನು ಕೊಟ್ಟಿದ್ದ ಹಣ ನನ್ನ ಹೆಡ್ ಆಫೀಸಿಗೆ ಕಳುಸುವುದು, ಮಂಜೂರಾತಿ ಮಾಡಕೊಳಾಕ ಇರುತ್ತಾವು, ಅವೆಲ್ಲಾ ನಿನಗೆ ಹೇಳಕಾಗಲ್ಲ ಅಂತಾ ನನಗೆ ಹೇಳಿದ್ರು. ಸದರಿ ದಿವಾಕರ ಕೆ. ಶಂಕಿನದಾಸರ ನೀಡಿರುವ ಸ್ವ ಖುಷಿ ಹೇಳಿಕೆಯು ಸುಳ್ಳಾಗಿರುತ್ತದೆ" ಎಂದು ತಿಳಿಸಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ಡಿಜಿಟಲ್ ವಾಯ್ಸ್ ರೆಕಾರ್ಡ್ ನಲ್ಲಿ ಆದ ದೂರುದಾರರ ಮತ್ತು 1ನೇ ಮತ್ತು 2ನೇ ಎದುರುದಾರರು ಹಾಗೂ ರಂಗಪ್ಪ, ಇವರ ವಾಯ್ಸ್ ರೆಕಾರ್ಡ್‌ನ್ನು ಅವರ ಕಚೇರಿ ಸಿಬ್ಬಂದಿ ಶ್ರೀ. ಕಲ್ಲಪ್ಪ ಗಂಗಪ್ಪ ಹಿರೇಹೊಳಿ, ರವರಿಗೆ ದಿನಾಂಕ:03/04/2017 ಹಾಗೂ ದಿನಾಂಕ 05/04/2017ರಂದು ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಆದ ಧ್ವನಿಯನ್ನು ತನಿಖಾಧಿಕಾರಿಗಳು ಚಾಲು ಮಾಡಿ ಕೇಳಿಸಿದಾಗ ಎದುರುದಾರರೆಲ್ಲರ ಧ್ವನಿಯನ್ನು ಗುರುತು ಹಿಡಿದು ಖಾತ್ರಿ ಪಡಿಸಿರುತ್ತಾರೆ.

ix. ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧ ಪಟ್ಟ ಕಡತವನ್ನು ಹಾಜರುಪಡಿಸುವಂತೆ 1ನೇ ಎದುರುದಾರರಿಗೆ ತಿಳಿಸಿದಾಗ, ಅವರು ದೂರುದಾರರಿಗೆ ಸಂಬಂಧ ಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಆ ಕಾಗದಪತ್ರಗಳ ಪ್ರತಿಗಳನ್ನು ಎದುರುದಾರರೇ ಜೆರಾಕ್ಸ್ ಮಾಡಿ ಧೃಡೀಕರಿಸಿ ಕೊಟ್ಟಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ವಿವಿಧ ಹಂತಗಳಲ್ಲಿ ಫೋಟೋ ತೆಗೆಯಿಸಿ, ತನಿಖಾಧಿಕಾರಿಗಳು ದಿ.05/04/2017ರಂದು ಸಂಜೆ 04-40 ಗಂಟೆಯಿಂದ ದಿನಾಂಕ: 06/04/2017ರ ಬೆಳಗಿನ ಜಾವ 2-30ಗಂಟೆಯವರೆಗೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಕಚೇರಿ, ಹಾವೇರಿ,

ಯಲ್ಲಿ ತನಿಖಾಧಿಕಾರಿಗಳು ಟ್ರಾಪ್ ಮಹಜರ್‌ನ್ನು ಉಕ್ತಲೇಖನ ನೀಡಿ ಲ್ಯಾಪ್ ಟಾಪ್‌ನಲ್ಲಿ ಟೈಪ್ ಮಾಡಿಸಿರುತ್ತಾರೆ.

x. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ: 14/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. 1ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಕಚೇರಿಯಿಂದ ತನ್ನ ಮೇಲೆ ದೋಷಾರೋಪಣೆ ಹೊರಿಸಿ ಜಾರಿಗೊಳಿಸಿದ್ದು, ಸದರಿ ದೋಷಾರೋಪಣೆಗೆ ತಾನು ಈಗಾಗಲೇ ತನ್ನ ಉತ್ತರವನ್ನು ಕಳುಹಿಸಿಕೊಟ್ಟಿರುವುದಾಗಿ ಹಾಗೂ ಸದರಿ ಉತ್ತರದ ಪ್ರತಿಯನ್ನು ತನ್ನ ಸಮಜಾಯಿಷಿಯೊಂದಿಗೆ ಕಳುಹಿಸಿಕೊಟ್ಟಿರುವುದಾಗಿ ತಿಳಿಸಿದ್ದು, ಆದರೆ ಎದುರುದಾರರು ತಮ್ಮ ಸಮಜಾಯಿಷಿಯೊಂದಿಗೆ ಉತ್ತರದ ಪ್ರತಿಯನ್ನು ಕಳುಹಿಸಿಕೊಟ್ಟಿರುವುದು ಇರುವುದಿಲ್ಲ. 1ನೇ ಎದುರುದಾರರು ಮುಂದುವರಿದು ತನ್ನ ಸಮಜಾಯಿಷಿಯಲ್ಲಿ ತಾನು ದೂರುದಾರರಿಗೆ ಎಂದೂ 20,000/– ರೂ.ಗಳನ್ನು ಲಂಚ ಕೊಡಲು ಬೇಡಿಕೆ ಇಟ್ಟಿರುವುದಿಲ್ಲ, ದೂರುದಾರರ ಯಾವುದೇ ಕೆಲಸ ತನ್ನ ಮುಂದೆ ಬಾಕಿ ಇರುವುದಿಲ್ಲ. ತನಿಖಾಧಿಕಾರಿಗಳು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ವರದಿಯನ್ನು ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದೂ ಅಲ್ಲದೆ ತನಗೆ ದೂರುದಾರರ ಮತ್ತು 2ನೇ ಎದುರುದಾರರ ಇರುವ ಹಣಕಾಸಿನ ವ್ಯವಹಾರ ಮತ್ತು ದೂರುದಾರ ಹಾಗೂ ಗಣೇಶ್ ಮಧ್ಯೆ ಇರುವ ವ್ಯವಹಾರ ತನಗೆ ಗೊತ್ತಿಲ್ಲ ಮತ್ತು ತಾನು ದೂರುದಾರರಿಗೆ ಆಫೀಸ್‌ಗೆ ಬರುವ ಅವಶ್ಯಕತೆ ಇಲ್ಲ ಅಂತಾ ತಿಳಿಸಿದ್ದೆ ಮತ್ತು ಧ್ವನಿ ಸಂಭಾಷಣೆ ತನ್ನದಲ್ಲ, ಈ ಕಾರಣದಿಂದ ತನ್ನ ಮೇಲೆ ನಡೆಸಬೇಕೆಂದಿರುವ ಇಲಾಖಾ ವಿಚಾರಣೆಯ ನಡವಳಿಕೆಗಳನ್ನು ಸ್ಥಗಿತಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ. 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರ ಮತ್ತು ಗಣೇಶ ಇಬ್ಬರೂ ಗೆಳೆಯರು, ದೂರುದಾರ ತಮ್ಮ ನಿಗಮಕ್ಕೆ ಅರ್ಜಿ ಹಾಕಿದ್ದು, ಸದರಿ ಅರ್ಜಿ ಆ ಕ್ಷೇತ್ರದ ಎಮ್.ಎಲ್.ಎ. ರವರಿಂದ ಆಯ್ಕೆ ಆದ ನಂತರ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದು ತಪಾಸಣೆ ಮಾಡಿರುತ್ತೇನೆ, ಮತ್ತು ಅರ್ಜಿಯನ್ನು ಬ್ಯಾಂಕಿಗೆ ಶಿಫಾರಸ್ಸು ಮಾಡಿ ಬ್ಯಾಂಕಿನಿಂದ ಕ್ಲೇಮು ತರಿಸಿಕೊಂಡಿರುತ್ತೇನೆ. ಆದರೆ ನಾನು ದೂರುದಾರರಿಂದ ಯಾವುದೇ ಹಣವನ್ನು ತೆಗೆದುಕೊಂಡಿರುವುದಿಲ್ಲ ಮತ್ತು ನನ್ನ ಕೆಲಸದ ಕರ್ತವ್ಯ ಮುಗಿದಿರುತ್ತದೆ. ಹಾಗೂ ದೂರುದಾರ ದಿನಾಂಕ: 05/04/2017ರಂದು ಮಧ್ಯಾಹ್ನ 3–00 ಗಂಟೆಗೆ ಆಫೀಸ್‌ಗೆ ಬಂದು ಹಣ ತಂದಿದ್ದೇನೆ ಎಂದು ಹೇಳಿದ ಆಗ ತಾನು ದಯವಿಟ್ಟು ಹಣದ ಬಗ್ಗೆ ನನಗೆ ಏನೂ ಹೇಳಬೇಡಿ ನೀವು ಜಿಲ್ಲಾ ವ್ಯವಸ್ಥಾಪಕರನ್ನು ಭೇಟಿ ಮಾಡಿ ಅವರು ರಜಾದಲ್ಲಿ ಇದ್ದಾರೆಂದು ಹೇಳಿರುತ್ತೇನೆ. ನಾಳೆ ಆಫೀಸ್‌ಗೆ ಬಂದ ಮೇಲೆ ಬಂದು ಭೇಟಿ ಮಾಡಿ ಎಂದು ಹೇಳಿರುತ್ತೇನೆ. ಆದರೂ ನನಗೆ ಬಿಡದೆ ಟೀ ಕುಡಿಯುವುದಕ್ಕೆ ಹೋಟೆಲ್‌ಗೆ ಹೋಗಿರುತ್ತಾರೆ, ಅಲ್ಲಿಂದ ಟೀ ಕುಡಿದು ಬಂದ ಮೇಲೇ ಕೂಡಾ ಹಣ ಪಡೆಯುವುದಕ್ಕೆ

ಪೀಡಿಸುತ್ತಾನೆ. ಆದರೂ ನನಗೆ ಹಣದ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುತ್ತೇನೆ. ನಮ್ಮ ಆಫೀಸ್ ನಲ್ಲಿ ಕೆಲಸ ಮಾಡುವ ಹುಡುಗ ಗಣೇಶ ಮತ್ತು ದೂರುದಾರರ ಗೆಳೆಯರು, ನಾನು ಗಣೇಶನಿಗೆ ನಿನ್ನ ಗೆಳೆಯನಿಗೆ ಹೇಳು ಜಿಲ್ಲಾ ವ್ಯವಸ್ಥಾಪಕರು ಬಂದ ಮೇಲೆ ಮಾತನಾಡುವುದಕ್ಕೆ ಅಂತಾ ಹೇಳಿರುತ್ತಾನೆ. ಆಗ ಗಣೇಶನು ಆಫೀಸ್‌ನಿಂದ ಕೆಳಕ್ಕೆ ಕರೆದುಕೊಂಡು ಹೋಗಿರುತ್ತಾನೆ" ಇಷ್ಟು ನಡೆದ ಘಟನೆ ಎಂದು ತಿಳಿಸಿರುತ್ತಾರೆ. 2ನೇ ಎದುರುದಾರರು ಮುಂದುವರೆದು "ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಕಚೇರಿಯಿಂದ ತನ್ನ ಮೇಲೆ ದೋಷಾರೋಪಣೆ ಹೊರಿಸಿ ಜಾರಿಗೊಳಿಸಿದ್ದು, ಸದರಿ ದೋಷಾರೋಪಣೆಗೆ ತಾನು ಈಗಾಗಲೇ ತನ್ನ ಉತ್ತರವನ್ನು ಕಳುಹಿಸಿಕೊಟ್ಟಿರುವುದಾಗಿ ಹಾಗೂ ಸದರಿ ಉತ್ತರದ ಪ್ರತಿಯನ್ನು ತನ್ನ ಸಮಜಾಯಿಷಿಯೊಂದಿಗೆ ಕಳುಹಿಸಿಕೊಟ್ಟಿರುವುದಾಗಿ ತಿಳಿಸಿದ್ದು, ಆದರೆ ಎದುರುದಾರರು ತಮ್ಮ ಸಮಜಾಯಿಷಿಯೊಂದಿಗೆ ಉತ್ತರದ ಪ್ರತಿಯನ್ನು ಕಳುಹಿಸಿಕೊಟ್ಟಿರುವುದು ಇರುವುದಿಲ್ಲ. 2ನೇ ಎದುರುದಾರರು ಮುಂದುವರಿದು ತನ್ನ ಸಮಜಾಯಿಷಿಯಲ್ಲಿ ತಾನು ದೂರುದಾರರಿಗೆ ಎಂದೂ 20,000/- ರೂ.ಗಳನ್ನು ಲಂಚ ಕೊಡಲು ಬೇಡಿಕೆ ಇಟ್ಟಿರುವುದಿಲ್ಲ, ದೂರುದಾರರ ಯಾವುದೇ ಕೆಲಸ ತನ್ನ ಮುಂದೆ ಬಾಕಿ ಇರುವುದಿಲ್ಲ. ತನಿಖಾಧಿಕಾರಿಗಳು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ವರದಿಯನ್ನು ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಕಾರಣದಿಂದ ತನ್ನ ಮೇಲೆ ನಡೆಸಬೇಕೆಂದಿರುವ ಇಲಾಖಾ ವಿಚಾರಣೆಯ ನಡವಳಿಕೆಗಳನ್ನು ಸ್ಥಗಿತಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ. 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ವಿಚಾರಣೆಯಿಂದ ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

xi. ಆಗ ತನಿಖಾಧಿಕಾರಿಗಳು ಲಂಚದ ಹಣವನ್ನು ಜಪ್ತು ಮಾಡಿಕೊಂಡು ಪಂಚರ ಸಮಕ್ಷಮ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಂಪೂರ್ಣ ತನಿಖೆಯನ್ನು ಪೂರೈಸಿ, ಅಭಿಯೋಜನಾ ಮಂಜೂರಾತಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ವಸ್ತುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

xii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು

ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ಸಲ್ಲಿಸಿದ್ದಾರೆ. ಆದರೆ ಎದುರುದಾರರು ನೀಡಿರುವ ಉತ್ತರದಲ್ಲಿ, ಅವರ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

3) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

4) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

5) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

24/11/24

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ, ಬೆಂಗಳೂರು.**